
ಶಾರುಖ್‌ನ ಕಟ್ಟಾ ಅಭಿಮಾನಿಗಳಾದ ಮಹಿಳೆಯರು ಅಲ್ಲಿಗೆ ಹೆಚ್ಚಿನಂಶ ಬರದಿರಲು ಕಾರಣವೇನಿರಬಹುದು? ಈ ಬಗ್ಗೆ ಶ್ರಯಾನಾ ಏನನ್ನೂ ಬರೆಯುವುದಿಲ್ಲ. ಅವರು ಹೇಳಿದ ವಿಚಾರಗಳು ಪುಲ್ಲಿಂಗಕ್ಕೆ ಯಾಕೆ ವರ್ತಿಸುವುದಿಲ್ಲ ಎನ್ನುವುದನ್ನೂ ಚರ್ಚಿಸುವುದಿಲ್ಲ. ಅದರ ಅರ್ಥದ ಪದರಗಳನ್ನು ನಾವೇ ಬಿಡಿಸಿ ನೋಡಬೇಕಾಗುತ್ತದೆ.




ಇಲ್ಲಿ ಬಹುಶಃ ಮೂರ್ತಕ್ಕೂ ಅಮೂರ್ತಕ್ಕೂ ಇರಬಹುದಾದ ಅಂತರವನ್ನು ನಾವು ಶೋಧಿಸಬೇಕೇನೋ? ಮಹಿಳೆಯರು ಹುಡುಕುತ್ತಿರುವುದು ಒಂದು ರೀತಿಯ ಬಿಡುಗಡೆಯನ್ನು. ತಮ್ಮ ಕನಸುಗಳನ್ನು ಸಾಕಾರಗೊಳಿಸುವ, ಸಹಬಾಳ್ವೆಯನ್ನು ನೀಡಬಲ್ಲ ಒಂದು ಕನಸಿನ ಲೋಕವನ್ನು. ಪ್ರತಿ ಘಟ್ಟದಲ್ಲೂ ಸ್ಥಾಪಿತ ಕಟ್ಟಳೆಗಳನ್ನು ಮುರಿಯುತ್ತಲೇ ಚೌಕಟ್ಟನ್ನು ವಿಸ್ತರಿಸುತ್ತಿರುವವರು. ಗಂಡಸರು ಯಾವುದರಿಂದ ಬಿಡುಗಡೆ ಹೊಂದಬೇಕು: ಸಾಮಾಜಿಕ ಕಟ್ಟಳೆಗಳಿಂದಲೇ? ಜಾತಿವ್ಯವಸ್ಥೆಯಿಂದಲೇ? ಈ ಬಿಡುಗಡೆಯನ್ನು ಅವರು ಎಲ್ಲಿ ಶೋಧಿಸುತ್ತಾರೆ? ಈ ಪ್ರಶ್ನೆಗಳನ್ನು ಕೇಳಿದಾಗ ಪುರುಷ ಮತ್ತು ಸ್ತ್ರೀಯರ ಆಶಯಗಳಲ್ಲಿರಬಹುದಾದ ವ್ಯತ್ಯಾಸ ಕಾಣಬಹುದು. ಪುರುಷರು ಬಾಹ್ಯಪ್ರಪಂಚದಲ್ಲಿ ತಮ್ಮ ಅಸ್ಮಿತೆಯನ್ನು ಶೋಧಿಸಿದರೆ, ದುಪ್ಪಟ್ಟು ದಮನಕ್ಕೊಳಗಾದ ಮಹಿಳೆಯರು ಅದನ್ನು ಒಳಪ್ರಪಂಚದಲ್ಲಿಯೇ ಶೋಧಿಸಬಹುದು.

ಸಿನಿಮಾ ನೋಡುವುದು ಪುರುಷರಿಗೆ ಆಶಯಗಳ ಅಭಿವ್ಯಕ್ತಿಯ ಪ್ರತೀಕವಾಗದೆ, ಕೇವಲ ಮನರಂಜನೆಯ ಮಾಧ್ಯಮವಾಗಿ ಮಾತ್ರ ನಿಲ್ಲುತ್ತದೆಯೇ? ಮಹಿಳೆಯರಿಗೆ ಸಿನಿಮಾ ನೋಡುವುದು ಒಂದು ಪ್ರತಿಭಟನೆಯ, ಚೌಕಟ್ಟನ್ನು ಮುರಿಯುವ ಪ್ರಕ್ರಿಯೆಯಾಗಬಹುದೆ? ಈ ದೃಷ್ಟಿಯಿಂದ ನೋಡಿದಾಗ, ಒಬ್ಬ ಸಿನಿಮಾ ನಟ ಅಥವಾ ಸಿನಿಮಾ ಕೊಡುವ ಬಿಡುಗಡೆ ಬೇರೆಯೇ ರೀತಿಯದ್ದು ಎನ್ನುವುದು ನಮಗೆ ಮನವರಿಕೆಯಾಗುತ್ತದೆ.

ಒಂದೇ ಜಾತಿಯಲ್ಲಿದ್ದರೂ, ಮಹಿಳೆಯರಿಗೆ ಬೇಕಾದ ಬಿಡುಗಡೆ ಮತ್ತು ಆಶಯಗಳು ಎಷ್ಟು